ವಿಜಯವಾಣಿ, Pg-01, 30/12/2016

# ಕೊಪ್ಪಳ್ ನಾಲೆ ಮೇಲೆ 10 ಮೆವಾ ವಿದ್ಯುತ್ ಉತ್ಪಾದನೆಗೆ ಕ್ರಮ

## ಸೋಲಾರ್ ಪ್ಯಾನಲ್‌ಗಳ ಅಳವಡಿಕೆಗೆ ಮುಂದಾದ ರಾಜ್ಯ ಸರ್ಕಾರ | ಗುಜರಾತ್ ಮಾದರಿಯಲ್ಲಿ ಯೋಜನೆ ಜಾರಿ

■ **ಶಿವಾನಂದ ತಗಡೂರು,** ವಿಜಯಪುರ

ನಾಲೆಗಳ ಮೇಲೆ ಸೋಲಾರ್ ಪ್ಯಾನಲ್ ಅಳವಡಿಸಿ ವಿದ್ಯುತ್ ಉತ್ಪಾದನೆ ಮಾಡುವ ಗುಜರಾತ್ ಮಾದರಿಯನ್ನು ಅನುಸರಿಸಲು ಮುಂದಾಗಿರುವ ರಾಜ್ಯ ಜಲಸಂಪನ್ಮೂಲ ಇಲಾಖೆ, ನಾರಾಯಣಪುರ ಜಲಾಶಯದ ಕೊಪ್ಪಳ್ ನೀರಾವರಿ ಯೋಜನೆಯಲ್ಲಿ ಸೋಲಾರ್ ಪ್ಯಾನಲ್‌ಗಳ ಅಳವಡಿಕೆಗೆ ಮುಂದಾಗಿದೆ.

ಸೋಲಾರ್ ವಿದ್ಯುತ್ ಉತ್ಪಾದನೆಗೆ ಪ್ಯಾನಲ್‌ಗಳ ಅಳವಡಿಕೆಗೆ ಜಾಗದ ಸಮಸ್ಯೆಯ ಕಾರಣ ವಿದ್ಯುತ್ ಉತ್ಪಾದನೆಗೆ ಸಮಸ್ಯೆಗಳಾಗಿದ್ದು, ಸರ್ಕಾರ ರೈತರ ಜತೆ ಒಡಂಬಡಿಕೆ ಮಾಡಿಕೊಂಡು ಯೋಜನೆ ಜಾರಿ ಮಾಡಲು ಮುಂದಾಗಿದೆ.

**ಮೆಗಾವಾಟ್ ವಿದ್ಯುತ್:** ರಾಜ್ಯದಲ್ಲಿ ಆಲಮಟ್ಟಿ ಬಲ ಮೇಲ್ದಂಡೆ ನಾಲೆಯ ಮೇಲೆ 6.35ಮೀ. ಉದ್ದಕ್ಕೆ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಿ 1 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದ್ದು, ನಿತ್ಯ 3900 ಯೂನಿಟ್ ವಿದ್ಯುತ್ ಉತ್ಪಾದನೆ ಆಗುವ ನಿರೀಕ್ಷೆ ಇದ್ದು, ಹವಾಮಾನ ವೈಪರೀತ್ಯದಿಂದ ವ್ಯತ್ಯಯವಾಗುವ ಸಾಧ್ಯತೆಯಿದೆ.

**ಯಂತ್ರೋಪಕರಣಕ್ಕೆ ಬಳಕೆ:** ನಾಲೆಯಲ್ಲಿ ಉತ್ಪತ್ತಿ ಆಗುವ ಸೋಲಾರ್ ವಿದ್ಯುತ್ತನ್ನು ಆಲಮಟ್ಟಿಯ ಎಡ ಮತ್ತು ಬಲ ಮೇಲ್ದಂಡೆ ಭಾಗದ ಯಂತ್ರಗಳ ಚಾಲನೆಗೆ ಬಳಸಿಕೊಳ್ಳಲಾಗುತ್ತಿದ್ದು, ಹೆಚ್ಚುವರಿ, ಉಳಿಕೆ ವಿದ್ಯುತ್‌ಗಳನ್ನು ಸರ್ಕಾರವೇ ಖರೀದಿಸಿ ಕೆಪಿಟಿಸಿಎಲ್ ಗ್ರಿಡ್‌ಗೆ ಸೇರಿಸುವ ವ್ಯವಸ್ಥೆ ಮಾಡಲಾಗಿದೆ. ಇದರಿಂದ ವಿದ್ಯುತ್ ಉತ್ಪಾದನೆ, ಬಳಕೆಯಲ್ಲಿ ಸ್ವಾವಲಂಬಿಯಾಗಿದೆ.

**ಕೊಪ್ಪಳ್ ನಾಲೆಗೂ ಯೋಜನೆ:** ನಾರಾಯಣಪುರ ಜಲಾಶಯ ಹಿನ್ನೀರು ಬಳಕೆಗೆ ಕೈಗೆತ್ತಿಕೊಂಡ ಕೊಪ್ಪಳ್ ನೀರಾವರಿ ಯೋಜನೆ ಹುನಗುಂದ ತಾಲೂಕಿಗೆ ಅನುಕೂಲವಾಗಲಿದೆ. ನಾಲೆಯ ಮೇಲೆ ಸುಮಾರು 10 ಕಿಲೋ ಮೀಟರ್ ಉದ್ದಕ್ಕೂ ಪ್ಯಾನಲ್ ಅಳವಡಿಕೆಯಿಂದ 10 ಮೆಗಾವಾಟ್ ವಿದ್ಯುತ್ ಉತ್ಪಾದನೆ ಯೋಜನೆಗೆ ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿದೆ.

**ತಗ್ಗುತ್ತಿರುವ ವೆಚ್ಚ ಪ್ರಮಾಣ:** ದಶಕದ ಹಿಂದೆ 1 ಮೆವಾಗೆ ಸೋಲಾರ್ ಅಳವಡಿಸಲು 18 ರಿಂದ 20 ಸಾವಿರ ರೂ. ಖರ್ಚಾಗುತ್ತಿತ್ತು. ಕಳೆದ ಎರಡು ವರ್ಷದ ಹಿಂದೆ 11 ಕೋಟಿ ರೂ. ಅಂದಾಜಿನಲ್ಲಿ 1 ಮೆವಾ ಸೋಲಾರ್ ಪ್ಯಾನಲ್ ಅಳವಡಿಕೆ ಮಾಡಲಾಗಿದ್ದು ಸೋಲಾರ್ ವಿದ್ಯುತ್ ಇನ್ನೂ ಅಗ್ಗವಾಗಲಿದೆ ಎನ್ನುವುದು ಅಧಿಕಾರಿಗಳ ವಿವರಣೆ.



### ಅನುಕೂಲಗಳೇನು?

- ನಾಲೆಯಲ್ಲಿ ಹರಿಯುವ ನೀರು ಬಿಸಿಲಿನ ಝಳಕ್ಕೆ ಆವಿಯಾಗಿ ಹೋಗುವುದನ್ನು ತಡೆಯಬಹುದು.
- ಸುತ್ತಲಿನ ರೈತರಿಗೆ ವಿದ್ಯುತ್ ಪೂರೈಕೆ ಮತ್ತು ವಿದ್ಯುತ್ ವಿಕೇಂದ್ರೀಕರಣಕ್ಕೆ ಒತ್ತು.
- ದಕ್ಷಿಣ ರಾಜ್ಯದಲ್ಲಿಯೇ ಪ್ರಥಮವಾಗಿ ನಾಲೆ ಮೇಲೆ ವಿದ್ಯುತ್ ಉತ್ಪಾದಿಸಲಾಗುತ್ತಿದೆ.
- ಸೋಲಾರ್ ಯೋಜನೆಗಾಗಿ ಭೂಸ್ವಾಧೀನ ಮಾಡಿಕೊಳ್ಳುವ ಅಗತ್ಯವಿಲ್ಲ.

> ಆಲಮಟ್ಟಿ ಬಲ ಮೇಲ್ದಂಡೆ ಮೇಲೆ ಸೋಲಾರ್ ಯೋಜನೆಯನ್ನು ಅಳವಡಿಸಿದಾಗ 11.43 ಕೋಟಿ ರೂ. ಖರ್ಚಾಗಿತ್ತು. ಮುಂದೆ ಈ ಮೊತ್ತ ಇನ್ನೂ ಕಡಿಮೆಯಾಗಲಿದೆ. ಈ ಯೋಜನೆಯ ಬಳಿಕ ವಿದ್ಯುತ್ ಸಮಸ್ಯೆಯೂ ತಪ್ಪಿದೆ.
>
> | ತಿರುಮೂರ್ತಿ ಅಧೀಕ್ಷಕ ಇಂಜಿನಿಯರ್

---

ವಿಜಯವಾಣಿ, Pg-06, 30/12/2016

# ಲೈನ್‌ಮನ್ ಮೇಲೆ ಹುಲಿ ಮರಿ ದಾಳಿ

**ಸಾಗರ(ಶಿವಮೊಗ್ಗ):** ತಾಲೂಕಿನ ಭಾರಂಗಿ ಹೋಬಳಿಯ ಕಟ್ಟಿನಕಾರು ಗ್ರಾಮದ ಅರಣ್ಯ ಪ್ರದೇಶದಲ್ಲಿ ಮೆಸ್ಕಾಂ ಲೈನ್‌ಮನ್ ಮೇಲೆ ಬುಧವಾರ ರಾತ್ರಿ ಹುಲಿ ಮರಿಯೊಂದು ದಾಳಿ ನಡೆಸಿ ಗಾಯಗೊಳಿಸಿದೆ. ಲೈನ್‌ಮನ್ ಅರವಿಂದ್ ರೆಡ್ಡಿ ಬುಧವಾರ ರಾತ್ರಿ ವಿದ್ಯುತ್ ಲೈನ್ ಪರಿಶೀಲನೆ ಮಾಡಲು ಹಿರಿಯ ಅಧಿಕಾರಿ ಇಂದ್ರೇಶ್ ಜತೆ ಬೈಕ್‌ನಲ್ಲಿ ಕಟ್ಟಿನಕಾರು ಗ್ರಾಮಕ್ಕೆ ತೆರಳಿದ್ದರು. ಅರವಿಂದ್ ಕಂಬದ ಬಳಿ ರಿಪೇರಿ ಮಾಡುತ್ತಿದ್ದಾಗ ಹುಲಿ ಮರಿಯೊಂದು ದಿಢೀರನೇ ದಾಳಿ ಮಾಡಿದ್ದು, ಅರವಿಂದ ರೆಡ್ಡಿ ಅವರ ಕಾಲು ಮತ್ತು ಕೈಗೆ ಸಣ್ಣಪುಟ್ಟ ಗಾಯಗಳಾಗಿವೆ. ಅವರನ್ನು ತುಮರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು. ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

### ನಿಮ್ಮ ಮೊಬೈಲ್‌ಗೆ ಬರಲಿದೆ ವಿದ್ಯುತ್ ಬಗ್ಗೆ ಸಂದೇಶ

# ಅಂಗೈಯಲ್ಲೇ ಮಾಹಿತಿ

• **ಆರ್. ತಾರಾನಾಥ್** ಚಿಕ್ಕಮಗಳೂರು

ತಾಂತ್ರಿಕವಾಗಿ ಜಗತ್ತು ಎಷ್ಟೇ ಮುಂದುವರೆದರೂ ಕರೆಂಟ್ ಯಾವಾಗ ಬರುತ್ತೆ, ಹೋಗುತ್ತೆ ಎಂಬುದನ್ನೇ ಹೇಳಲಾಗಲ್ಲಎಂಬಮಾತುಪ್ರಚಲಿತದಲ್ಲಿತ್ತು. ಆದರೆ, ಈ ಮಾತು ಇನ್ನು ಅಪ್ರಸ್ತುತ. ವಿದ್ಯುತ್ ಬಗ್ಗೆ ಗ್ರಾಹಕರ ಮೊಬೈಲ್‌ಗೆ ಸಂಪೂರ್ಣ ಮಾಹಿತಿ ರವಾನಿಸಲು ರಾಜ್ಯದ ಐದು ವಿದ್ಯುತ್ ನಿಗಮಗಳು ಕಾರ್ಯಪ್ರವೃತ್ತವಾಗಿವೆ.

ಹೌದು, ವಿದ್ಯುತ್ ಸೇವೆ ಜನಸ್ನೇಹಿಯಾಗಬೇಕೆಂಬ ಉದ್ದೇಶದಿಂದ ರಾಜ್ಯದ ಎಲ್ಲ ಐದು ವಿದ್ಯುತ್ ನಿಗಮಗಳು, ಕೇಂದ್ರ ಸರ್ಕಾರದ ಊರ್ಜ (ನಗರ) ಊರ್ಜ ಮಿತ್ರ (ಗ್ರಾಮೀಣ) ಎಂಬ ಆ್ಯಪ್‌ಗಳನ್ನು ಬಳಸಿಕೊಂಡು ಕರೆಂಟ್ ಹೋದಾಗ ಮತ್ತು ಬಂದಾಗ ಗ್ರಾಹಕರ ಮೊಬೈಲ್‌ಗೇ ಈ ಬಗ್ಗೆ ಮಾಹಿತಿ ರವಾನಿಸುವಂತಹ ಯೋಜನೆಯನ್ನು ಈಗಾಗಲೇ ಕೈಗೊಂಡಿದ್ದು, ಈಗ ಗ್ರಾಹಕರಿಂದ ಮೊಬೈಲ್ ಸಂಖ್ಯೆ ಸಂಗ್ರಹಿಸುವ ಕಾರ್ಯ ಭರದಿಂದ ಸಾಗಿದೆ. ಕೆಲವು ಜಿಲ್ಲೆಗಳಲ್ಲಿ ಶೇ.40ರಷ್ಟು ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆಯನ್ನು ಈಗಾಗಲೇ ನಿಗಮದ ಅಧಿಕಾರಿಗಳಿಗೆ ನೀಡಿದ್ದಾರೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಶೇ.10ರಷ್ಟು ಗ್ರಾಹಕರ ಮಾತ್ರ ಅಧಿಕಾರಿಗಳಿಗೆ ತಮ್ಮ ಮೊಬೈಲ್ ಸಂಖ್ಯೆ ನೀಡಿದ್ದಾರೆ. ನಿಗದಿಯಂತೆ ಗ್ರಾಹಕರ ಮೊಬೈಲ್ ಸಂಖ್ಯೆ ಸಂಗ್ರಹ ಕಾರ್ಯ ಪೂರ್ಣಗೊಂಡಿದ್ದರೆ ಇಷ್ಟೊತ್ತಿಗಾಗಲೇ ಈ ಸೇವೆ ಆರಂಭವಾಗಬೇಕಿತ್ತು. ಆದರೆ, ಗ್ರಾಹಕರು ಸರಿಯಾಗಿ ಸ್ಪಂದಿಸದಿರುವುದರಿಂದ ನಿರ್ದಿಷ್ಟ ಗುರಿಯ ಮೊಬೈಲ್ ಸಂಖ್ಯೆಗಳನ್ನು ಸಂಗ್ರಹಿಸಿದ ಬಳಿಕ ಈ ಸೇವೆ ಒದಗಿಸಲು ಚಿಂತಿಸಲಾಗಿದೆ.

ಯಾವ್ಯಾವ ಮಾಹಿತಿ ದೊರೆಯುತ್ತೆ: ಲೋಡ್ ಶೆಡ್ಡಿಂಗ್, ವಿದ್ಯುತ್ ಲೈನ್‌ಗಳ ದುರಸ್ತಿಗಾಗಿ ಯಾವ ದಿನ, ಎಷ್ಟು ಹೊತ್ತು ವಿದ್ಯುತ್ ಸರಬರಾಜು ಹಾಗೂ ನಿಲುಗಡೆಯಾಗಲಿದೆ. ಯಾವ ಸಮಯಕ್ಕೆ ವಿದ್ಯುತ್ ಬರುತ್ತದೆ ಮತ್ತು ಹೋಗುತ್ತದೆ ಎಂಬ ಮಾಹಿತಿ ಮುಂಚಿತವಾಗಿಯೇ ಈ ಯೋಜನೆಯಿಂದ ಗ್ರಾಹಕರಿಗೆ ಸಿಗಲಿದೆ. ಜತೆಗೆ ಕೆಲವು ಬಾರಿ ಇದ್ದಕ್ಕಿದ್ದಂತೆ ವಿದ್ಯುತ್ ಕೈಕೊಟ್ಟರೂ ಗ್ರಾಹಕರ ಮೊಬೈಲ್ ಸಂಖ್ಯೆಗೆ ವಿದ್ಯುತ್ ಕಡಿತಗೊಂಡ ಬಗ್ಗೆ ಹಾಗೂ ವಿದ್ಯುತ್ ಯಾವಾಗ ಬರುತ್ತದೆ ಎಂಬ ಬಗ್ಗೆಯೂ ಗ್ರಾಹಕರಿಗೆ ಸಂದೇಶ ತಲುಪಲಿದೆ. ಇಷ್ಟೇ ಅಲ್ಲದೇ, ವಿದ್ಯುತ್ ಬಿಲ್ ಕಟ್ಟಿದ್ದು, ಬಾಕಿಯ ಮಾಹಿತಿ, ವಿದ್ಯುತ್ ಸಂಬಂಧಿತ ಯೋಜನೆಗಳ ಮಾಹಿತಿಯೂ ( ಹೊಸ ವ್ಯವಸ್ಥೆಯಿಂದ ಗ್ರಾಹಕರ ಮೊಬೈಲ್‌ಗೆ ಸಂದೇಶದ ಮೂಲಕ ತಲುಪಲಿದೆ ಎನ್ನುತ್ತಾರೆ ವಿದ್ಯುತ್ ನಿಗಮಗಳ ಅಧಿಕಾರಿಗಳು.

**ಏನೇನು ಕೊಡಬೇಕು?:** ಗ್ರಾಹಕರು ತಮ್ಮ ಹೆಸರು, ಮೊಬೈಲ್, ಮನೆಯ ಮೀಟರ್ ಬೋರ್ಡ್, ಮನೆಯ ಸಮೀಪದ ವಿದ್ಯುತ್ ಕಂಬದ ಸಂಖ್ಯೆ, ತಮ್ಮ ವಾರ್ಡ್, ಬೀದಿ, ಹಳ್ಳಿ, ತಾಲೂಕಿನ ವಿವರ ನೀಡಬೇಕು. ಈ ಮಾಹಿತಿ ಹತ್ತಿರದ ಮೆಸ್ಕಾಂ ಶಾಖಾ ಕಚೇರಿ, ಉಪವಿಭಾಗ ಕಚೇರಿ, ವಿಭಾಗೀಯ ಕಚೇರಿಗೆ ಖುದ್ದಾಗಿ ಅಥವಾ ಅಂಚೆ ಕಾರ್ಡ್ ಅಥವಾ ಮೀಟರ್ ರೀಡರ್ ಮೂಲಕ ತಲುಪಿಸಬಹುದು. ಇಷ್ಟು ನೀಡಿದರೆ ವಿದ್ಯುತ್ ಬಗೆಗಿನ ಪ್ರತಿಕ್ಷಣದ ಎಲ್ಲ ಮಾಹಿತಿ ನಿಮ್ಮ ಮೊಬೈಲ್‌ಗೆ ಸಂದೇಶದ ಮೂಲಕ ತಲುಪಲಿದೆ.

> **ಬಹಳಷ್ಟು ಗ್ರಾಹಕರು ಮೊಬೈಲ್ ಸಂಖ್ಯೆ ನೀಡಲು ಹಿಂದೇಟು ಹಾಕುತ್ತಿದ್ದಾರೆ. ಹಾಗಾಗಿ ನಿರೀಕ್ಷಿತ ಪ್ರಗತಿ ಕಂಡಿಲ್ಲ. ವಿದ್ಯುತ್ ಸೇವೆ ಜನಸ್ನೇಹಿ ಯಾಗಬೇಕೆಂಬುದು ಸರ್ಕಾರದ ಉದ್ದೇಶ ವಾಗಿದ್ದು ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆ ನೀಡಿ ಈ ಸೇವೆ ಪಡೆಯಬೇಕು.**
>
> • **ವೆಂಕಟೇಶ್** ಕಾರ್ಯ ನಿರ್ವಾಹಕ ಎಂಜಿನಿಯರ್, ಮೆಸ್ಕಾಂ

### 2 ಸಾವಿರ ಖಾತೆಗಳಲ್ಲಿ ₹1,600 ಕೋಟಿ!

# ಎಸ್ಕಾಂಗಳ ಮೇಲೂ ಐಟಿ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: 14 ಸಹಕಾರಿ ಬ್ಯಾಂಕ್‌ಗಳಲ್ಲಿ ದೊಡ್ಡ ಮೊತ್ತದ ಠೇವಣಿ ಇಟ್ಟಿರುವ ವ್ಯಕ್ತಿಗಳ ಮೇಲೆ ಕಣ್ಣಿಟ್ಟಿರುವ ಆದಾಯ ತೆರಿಗೆ (ಐಟಿ) ಇಲಾಖೆ ಅಧಿಕಾರಿಗಳು ವಿದ್ಯುತ್ ಸರಬರಾಜು ಕಂಪೆನಿಗಳು (ಎಸ್ಕಾಂಗಳು), ಆಸ್ತಿ ತೆರಿಗೆ ಹಾಗೂ ವಿವಿಧ ಹಣಕಾಸು ಸಂಸ್ಥೆಗಳಲ್ಲಿ ಹಣ ವರ್ಗಾವಣೆ ಮಾಡಿದವರ ಮೇಲೂ ನಿಗಾ ಇಟ್ಟಿದ್ದಾರೆ.

ನೋಟು ರದ್ದತಿ ಬಳಿಕ ಭಾರಿ ಮುಖಬೆಲೆಯ ನೋಟುಗಳಲ್ಲಿ ವಿದ್ಯುತ್ ಬಿಲ್, ಆಸ್ತಿ ತೆರಿಗೆ ಪಾವತಿಸಲು ಅವಕಾಶ ವಿತ್ತು. ಇಂಧನ ಇಲಾಖೆ ವ್ಯಾಪ್ತಿಯ ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿ, ಮಂಗಳೂರು ವಿದ್ಯುತ್ ಸರಬರಾಜು ಕಂಪೆನಿ ಸೇರಿದಂತೆ ವಿವಿಧ ಎಸ್ಕಾಂಗಳಲ್ಲಿ ಒಟ್ಟಾರೆ ₹ 386 ಕೋಟಿಗೂ ಹೆಚ್ಚಿನ ಮೊತ್ತ ಪಾವತಿಯಾಗಿತ್ತು.

ಹಳೆಯ ನೋಟುಗಳಲ್ಲಿ ಈ ಮೊತ್ತ ಸಂಗ್ರಹಿಸಲಾಗಿದೆ ಎಂದು ನಮೂದಿಸಿ, ಈ ಅವಧಿಯಲ್ಲಿ ಸಂಗ್ರಹವಾಗಿದ್ದ ₹ 50 ಮತ್ತು ₹ 100ರ ಮುಖಬೆಲೆಯ ನೋಟುಗಳನ್ನು ಪರಿವರ್ತನೆ ಮಾಡಲಾಗಿದೆ ಎಂಬ ಸಂಶಯದ ಮೇರೆಗೆ ಐಟಿ ಅಧಿಕಾರಿಗಳು ಎಸ್ಕಾಂಗಳ ಆರ್ಥಿಕ ವಹಿವಾಟಿನ ಮೇಲೆಯೂ ನಿಗಾ ಇಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

**2 ಸಾವಿರ ಖಾತೆಗಳಲ್ಲಿ ₹ 1600 ಕೋಟಿ:**

ರಾಜ್ಯದಲ್ಲಿ 285 ಸಹಕಾರಿ ಬ್ಯಾಂಕ್‌ಗಳು ನೋಂದಣಿಯಾಗಿದ್ದು, ಈ ಪೈಕಿ 80 ಬ್ಯಾಂಕ್‌ಗಳು ಮಾತ್ರ ಲೆಕ್ಕ ಪರಿಶೋಧನಾ ವರದಿ ಸಲ್ಲಿಸಿವೆ.

ನೋಟು ರದ್ದತಿ ಬಳಿಕ 14 ಸಹಕಾರಿ ಬ್ಯಾಂಕ್‌ಗಳಲ್ಲಿ ದೊಡ್ಡ ಮೊತ್ತದ ಹಣ ಜಮೆಯಾಗಿರುವ ಮಾಹಿತಿ ಐಟಿ ಅಧಿಕಾರಿಗಳಿಗೆ ದೊರೆತಿದೆ. ಈ ಬ್ಯಾಂಕ್‌ಗಳ ಕೇವಲ 2 ಸಾವಿರ ಖಾತೆಗಳಲ್ಲಿ ₹1,600 ಕೋಟಿ ಸಂಗ್ರಹವಾಗಿದೆ. ಭರ್ಜರಿ ಮೊತ್ತದ ಹಣ ಸಂದಾಯ ಮಾಡಿರುವವರಿಗೆ ನೋಟಿಸ್ ಜಾರಿ ಮಾಡಿ ವಿವರಣೆ ಪಡೆಯಲು ಐಟಿ ಅಧಿಕಾರಿಗಳು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಠೇವಣಿ ರೂಪದಲ್ಲಿ ಸಂದಾಯ ಮಾಡಿದ ಹಣದ ಬಗ್ಗೆ ಸಮರ್ಪಕ ದಾಖಲೆ ನೀಡದೇ ಇದ್ದರೆ, ಹಣ ಮುಟ್ಟುಗೋಲು ಸೇರಿದಂತೆ ಕಠಿಣ ಕ್ರಮ ಕೈಗೊಳ್ಳುವ ಕುರಿತು ಐಟಿ ಅಧಿಕಾರಿಗಳು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ನಿರ್ದೇಶನ ಕೋರಿ ಪತ್ರ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಂಗಳೂರು, ತುಮಕೂರು, ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳ ದಾಖಲೆಯನ್ನು ಐಟಿ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಇದಲ್ಲದೇ ಬಹು ಕೋಟಿ ಜಮೆಯಾಗಿರುವ ಬೆಳಗಾವಿ, ಶಿವಮೊಗ್ಗ ಮತ್ತಿತರ ಡಿಸಿಸಿ ಬ್ಯಾಂಕ್‌ಗಳ ಮೇಲೆಯೂ ಐಟಿ ಅಧಿಕಾರಿಗಳು ನಿಗಾ ಇಟ್ಟಿದ್ದಾರೆ.

ಈ ಅವಧಿಯಲ್ಲಿ ಬಹುಕೋಟಿ ಹಣ ವರ್ಗಾವಣೆ ನಡೆಸಿರುವ ಸಹಕಾರಿ ಬ್ಯಾಂಕ್‌ಗಳು, ಪಟ್ಟಣ ಸಹಕಾರ ಬ್ಯಾಂಕ್‌ಗಳನ್ನೂ ಐಟಿ ಅಧಿಕಾರಿಗಳು ತಪಾಸಣೆಗೆ ಒಳಪಡಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

**MANGALORE ELECTRICITY SUPPLY COMPANY LIMITED**
(A Government of Karnataka undertaking)
Corporate Office, "MESCOM BHAVANA", Kavoor Cross Road, Bejai, Mangaluru - 575004. E-mail : seecoml@rediffmail.com
Corporate Identity No. (CIN) U40109 KA 2002 SGC 030425

No: SEE(Coml)/DCA(EBC)/AAO(EBC)/2016-17/4891 Date: 29.12.2016

## NOTIFICATION

Sub : Fuel Cost Adjustment Charges

*****

It has been brought to the kind notice of the esteemed Consumers of MESCOM that, based on the application filed by MESCOM under KERC (Fuel Cost Adjustment Charges) Regulations 2013, for allowing to collect Fuel Cost Adjustment Charges, the Hon'ble Karnataka Electricity Regulatory Commission having recognized the increase in fuel cost in the Second quarter of FY 2016-17, has ordered vide order dated 22.12.2016 for collection of Fuel Cost Adjustment Charges at the rate of 8 paise (eight paise) per unit during the billing quarter Jan-17 to Mar-17. This charge will be collected in addition to the tariff approved in the Commission's Tariff Order dated 30.03.2016. This charge will be included in the bills issued by MESCOM during the month of Jan-17 to Mar-17. The consumers can visit: www.mesco.in for KERC order in the matter.

Sd/- Superintending Engineer (Ele)(Coml)
MESCOM, Mangaluru

ಪ್ರಜಾವಾಣಿ Pg 3A, 30/12/2016.

ಅದಮ್ಯ ಚೇತನ ಫೌಂಡೇಷನ್ ಮತ್ತು ಶಂಕರ ಕ್ಯಾನ್ಸರ್ ಫೌಂಡೇಷನ್ ಪ್ರಾಯೋಜಕತ್ವ

# ಇಂದಿನಿಂದ ಸೇವಾ ಉತ್ಸವ ಮೇಳ

ಪ್ರಜಾವಾಣಿ ವಾರ್ತೆ



ಉತ್ಸವದಲ್ಲಿ ಪ್ರದರ್ಶಿಸಲಾದ ಜೆಟ್ ವಿಮಾನ ಮಾದರಿ ಎದುರು ಪೊಲೀಸರು ಛಾಯಾಚಿತ್ರ ಕ್ಲಿಕ್ಕಿಸಿಕೊಂಡರು – ಪ್ರಜಾವಾಣಿ ಚಿತ್ರ

**ಬೆಂಗಳೂರು:** ಅದಮ್ಯ ಚೇತನ ಫೌಂಡೇಷನ್ ಮತ್ತು ಶಂಕರ ಕ್ಯಾನ್ಸರ್ ಫೌಂಡೇಷನ್ ಆಶ್ರಯದಲ್ಲಿ ಡಿ.30 ರಿಂದ ಜ. 2 ರವರೆಗೆ ನಗರದ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಾಲ್ಕು ದಿನಗಳ 'ಸೇವಾ ಉತ್ಸವ 2017 ಮೇಳ' ಏರ್ಪಡಿಸಲಾಗಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅದಮ್ಯ ಫೌಂಡೇಷನ್ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ 'ವೈದ್ಯರು, ರಕ್ಷಣಾ ಇಲಾಖೆ, ಸಂಗೀತ, ಶಿಕ್ಷಣ, ಪರಿಸರ ಕ್ಷೇತ್ರದ ಸಂಗಮಕ್ಕೆ ಮೇಳ ಸಾಕ್ಷಿಯಾಗಲಿದೆ. ಕಾರ್ಯಕ್ರಮವನ್ನು ರಾಷ್ಟ್ರಪತಿ ಪ್ರಣವ್ ಮುಖರ್ಜಿ ಉದ್ಘಾಟನೆ ಮಾಡಲಿದ್ದಾರೆ. ಮೇಳದಲ್ಲಿ 2 ಲಕ್ಷಕ್ಕೂ ಅಧಿಕ ಮಂದಿ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

'ಬೆಳಿಗ್ಗೆ 10 ಗಂಟೆಗೆ ರಾಜಭವನದಿಂದ ಹೊರಡಲಿರುವ ರಾಷ್ಟ್ರಪತಿಗಳು ಶಂಕರ ಕ್ಯಾನ್ಸರ್ ಆಸ್ಪತ್ರೆಯ ಮತ್ತು ಸಂಶೋಧನಾ ಕೇಂದ್ರವನ್ನು ಲೋಕಾರ್ಪಣೆಗೊಳಿಸಿ ನಂತರ ಶಂಕರ ಕ್ಯಾನ್ಸರ್ ತಡೆ ಮತ್ತು ಸಂಶೋಧನಾ ಸಂಸ್ಥೆಯ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ' ಎಂದು ಶಂಕರ ಫೌಂಡೇಷನ್ ಅಧ್ಯಕ್ಷ ಡಾ. ಬಿ.ಎಸ್.ಶ್ರೀನಾಥ್ ಹೇಳಿದರು.

ರಾಷ್ಟ್ರಪತಿಯವರ ಕಾರ್ಯಕ್ರಮದಲ್ಲಿ ಭಾಗವಹಿಸಲು ಡಿ.30 ರಂದು ಪಾಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರಿಗಾಗಿ ಮೈದಾನದಲ್ಲಿ ಅದಮ್ಯ ಚೇತನ ಫೌಂಡೇಷನ್ ಪಾಸ್ ವಿತರಣಾ ಕೌಂಟರ್ ಸ್ಥಾಪಿಸಿದೆ. ಉಳಿದ ಮೂರು ದಿನಗಳು ಮೇಳದಲ್ಲಿ ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ಫೌಂಡೇಷನ್ ಸದಸ್ಯರೊಬ್ಬರು ತಿಳಿಸಿದ್ದಾರೆ.

**ಬಸ್ ಮೂಲಕ ಕ್ಯಾನ್ಸರ್‌ಗೆ ಕಡಿವಾಣ:** ಗ್ರಾಮೀಣ ಭಾಗದಲ್ಲಿ ಹೆಚ್ಚುತ್ತಿರುವ ಕ್ಯಾನ್ಸರ್ ತಡೆಗಟ್ಟುವಿಕೆಗೆ ಶಂಕರ ಫೌಂಡೇಷನ್ ವತಿಯಿಂದ ಸಂಚಾರಿ ಕ್ಯಾನ್ಸರ್ ತಡೆ ಬಸ್ ಸೇವೆ ಪ್ರಾರಂಭವಾಗಲಿದೆ. ಈ ಬಸ್ಸಿನಲ್ಲಿ ಎಕ್ಸ್‌ರೇ, ಅಲ್ಟ್ರಾಸೋನೊಗ್ರಾಫಿ, ಮ್ಯಾಮೊಗ್ರಾಫಿ, ರಕ್ತತಪಾಸಣೆ ಪರೀಕ್ಷೆ ಮಾಡಬಹುದಾದ ಸೌಲಭ್ಯಗಳಿವೆ. ರಾಮನಗರ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಸಂಚರಿಸಿ ಕ್ಯಾನ್ಸರ್ ಪೀಡಿತ ಜನತೆಯಲ್ಲಿ ರೋಗ ತಡೆ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಯಲಿದೆ.

**ಸುಜಲಾಂ ಸುಫಲಾಂ:** ಇದೇ 31ರ ಮಧ್ಯರಾತ್ರಿ, ನೀರಿನ ಸಂರಕ್ಷಣೆ ಮತ್ತು ಪರಿಸರ ಸಂರಕ್ಷಣೆಗಾಗಿ ನಗರದ ನದಿ ಮತ್ತು ಕೆರೆಗಳ ಪುನರುಜ್ಜೀವನ ಹೇಗೆ ಎಂಬುದರ ಕುರಿತು ಚರ್ಚೆ ಕೇಂದ್ರ ಸಂಸದೀಯ ವ್ಯವಹಾರಗಳ ಮತ್ತು ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಅನಂತಕುಮಾರ್ ಉಪಸ್ಥಿತಿಯಲ್ಲಿ ನಡೆಯಲಿದೆ. ವೃಷಭಾವತಿ, ಕುಮುದ್ವತಿ ಸಮೇತ ನಗರದಲ್ಲಿರುವ ಸಪ್ತನದಿಗಳ ಸಂರಕ್ಷಣೆಗಳಿಗೆ ಪಣ ತೊಡಲು ಸಂಕಲ್ಪವನ್ನು ಹೊಸ ವರ್ಷದ ಆರಂಭಕ್ಕೆ ಮಾಡಲಿದ್ದಾರೆ.

ಇದಕ್ಕೂ ಮೊದಲು ಸಂಜೆ 7.30ಕ್ಕೆ ಬಿ.ವಿ.ರಾಜಾರಾಂ ನಿರ್ದೇಶನದ ವಿಶೇಷ ನಾಟಕ 'ನೀರು' ಪ್ರದರ್ಶನಗೊಳ್ಳಲಿದೆ. ನಂತರ ಪ್ರೊ. ಕೃಷ್ಣೇಗೌಡ ಮತ್ತಿತರಿಂದ ಅನಂತ ಹರಟೆಕಟ್ಟೆ ಎಂಬ ಹಾಸ್ಯಭರಿತ ಸಂವಾದ ಕಾರ್ಯಕ್ರಮವೂ ನಡೆಯಲಿದೆ.

**ಪರಿಸರ ಜಾಗೃತಿ:** ಜನವರಿ 1ರ ಮುಂಜಾನೆ 8 ಗಂಟೆಗೆ, ಪರಿಸರ ಸಂರಕ್ಷಣೆಗಾಗಿ ಮತ್ತು ಸುಸ್ಥಿರ ಪರಿಸರ ವ್ಯವಸ್ಥೆ ಕಾಪಾಡುವ ಹಸಿರು ಭಾನುವಾರ ಸಸಿ ನೆಡುವ ಕಾರ್ಯಕ್ರಮ ನಡೆಯಲಿದೆ. ಶೂನ್ಯ ತ್ಯಾಜ್ಯ, ಹಸಿರು ಅಡುಗೆಮನೆ, ಹಸಿರು ತೋಟ, ಬಯೋಗ್ಯಾಸ್, ಇಂಧನ ಉಳಿತಾಯದ ಸೂತ್ರಗಳು, ಮತ್ತು ಹಸಿರು ಜೀವನಕ್ಕೆ ಪೂರಕವಾದ ಸಾಧನಗಳ ಬಗ್ಗೆ ಪ್ರದರ್ಶನ ಕೂಡ ನಡೆಯಲಿದೆ.

**ವಂದೇ ಮಾತರಂ:** ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶದ ಅಖಂಡತೆ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ 'ವಂದೇ ಮಾತರಂ' ಗೀತೆಯನ್ನು ಸಾಮೂಹಿಕವಾಗಿ ಹಾಡಲಿದ್ದಾರೆ. ನಗರದಲ್ಲಿ ನೆಲೆಸಿರುವ 28 ರಾಜ್ಯಗಳ ಜನ ತಮ್ಮ ರಾಜ್ಯದ ವಿಶೇಷ ವೇಷ ಭೂಷಣಗಳೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. 10 ಸಾವಿರಕ್ಕೂ ಅಧಿಕ ಜನ ಭಾಗವಹಿಸಲಿದ್ದಾರೆ. ಜನವರಿ 1ರ ಸಂಜೆ 4 ಗಂಟೆಗೆ ನಡೆಯಲಿರುವ ಗಾಯನದಲ್ಲಿ ಲೋಕಸಭೆ ಸ್ಪೀಕರ್ ಸುಮಿತ್ರಾ ಮಹಾಜನ್ ಅವರು ಇರಲಿದ್ದಾರೆ.

**ವಿದ್ಯಾರ್ಥಿಗಳಿಗೆ ವಿದ್ಯುತ್ ಉಳಿತಾಯ ಸ್ಪರ್ಧೆ:** ವಿದ್ಯುತ್ ಉಳಿತಾಯದ ಲಾಭದ ತಿಳಿವಳಿಕೆ ಮೂಡಿಸಲು ಮತ್ತು ಕಡಿಮೆ ವಿದ್ಯುತ್ ಬಳಕೆಗೆ ಪ್ರೇರೇಪಿಸಲು ಸುಮಾರು 50 ಸಾವಿರ ಮಕ್ಕಳಿಗೆ ವಿವಿಧ ಸ್ಪರ್ಧೆ ಆಯೋಜಿಸಲಾಗಿದೆ.

**ಆಹಾರ ಮಳಿಗೆಗಳು:** ವಿವಿಧ ರಾಜ್ಯಗಳ ವಿಶೇಷ ತಿನಿಸುಗಳನ್ನು ಸವಿಯಲು 30ಕ್ಕೂ ಅಧಿಕ ಆಹಾರ ಮಳಿಗೆಗಳು ಮೇಳದಲ್ಲಿರಲಿವೆ.

ಪರಿಸರ ಸ್ನೇಹಿ, ಸ್ಥಳೀಯ ಉತ್ಪನ್ನಗಳು, ಕರಕುಶಲ ವಸ್ತುಗಳು, ಸೌರ ವಿದ್ಯುತ್ ಉಪಕರಣಗಳು, ಸಿರಿಧಾನ್ಯ ಸೇರಿದಂತೆ ಹಲವು ವಸ್ತುಗಳ ಮಾರಾಟ ಮಳಿಗೆಗಳು ಸೇರಿದಂತೆ ಒಟ್ಟು 200ಕ್ಕೂ ಅಧಿಕ ಮಳಿಗೆಗಳು ಮೇಳದಲ್ಲಿರಲಿವೆ. ಪ್ರತಿದಿನ ರಕ್ತದಾನ ಶಿಬಿರ ನಡೆಯಲಿದೆ. ನಾಲ್ಕು ದಿನದ ಮೇಳದಲ್ಲಿ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

## ಅಂತರಿಕ್ಷ ಮತ್ತು ವೈಮಾನಿಕ ಪ್ರದರ್ಶನ

ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೊ), ರಕ್ಷಣಾ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಥೆ (ಡಿಆರ್‌ಡಿಒ), ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಸೇರಿದಂತೆ ದೇಶದ ಹಲವು ಖ್ಯಾತ ರಕ್ಷಣಾ ಸಂಸ್ಥೆಗಳಿಂದ ಕ್ಷಿಪಣಿ, ಯುದ್ಧವಿಮಾನ, ರಾಡಾರ್, ಟಾರ್ಪಿಡೊ ಮತ್ತು ಇನ್ನಿತರ ಅತ್ಯಾಧುನಿಕ ರಕ್ಷಣಾ ಸಲಕರಣೆಗಳ ಪ್ರದರ್ಶನ ಮತ್ತು ವಿಜ್ಞಾನಿಗಳ ಜತೆ ಸಂಭಾಷಣೆ ನಡೆಸುವ ಕಾರ್ಯಕ್ರಮ ಇರಲಿದೆ.

ಮಾನವ ರಹಿತ ಮಿನಿ ವಿಮಾನಗಳ ಹಾರಾಟ, ಡ್ರೋನ್, ಮಕ್ಕಳಿಗಾಗಿ ಗ್ಲೈಡರ್ ತಯಾರಿಕೆ ಕುರಿತು ಪ್ರಾತ್ಯಕ್ಷಿಕ ಕಾರ್ಯಾಗಾರ ನಡೆಯಲಿದೆ. ಭಾರತೀಯ ವಾಯುಪಡೆಯ ವಿಶೇಷ ಕವಾಯತು ಪ್ರದರ್ಶನವೂ ನಡೆಯಲಿದೆ.

ಯುದ್ಧ ವಿಮಾನ ಹಾರಿಸುವ ಅನುಭವ ಪಡೆಯಲು ಸಿಮ್ಯುಲೇಟರ್ ಪ್ರಾಯೋಗಿಕತೆ ಮೇಳದಲ್ಲಿರಲಿದೆ.